

# ಬಯಲ ಬಾಗಿಲ ಬಣ್ಣದ ತೋರಣ

ಹಗಲು ಬಲಿಯುತ್ತಾ ನಿಧಾನಕ್ಕೆ ಕಾವೇರಿಸಿಕೊಳ್ಳುತ್ತಿದ್ದ ಹವೆಯಲ್ಲಿ, ಶನಿಶಿಂಗಣಾಪುರ ಕಣ್ತುಂಬಿಕೊಂಡು, ರಾಜ್ಯ ಹೆದ್ದಾರಿಯಿಂದ ಎಡಕ್ಕೆ ತಿರುಗಿ ಮರಳಿ ಶಿರಡಿ ದಾರಿಯಲ್ಲಿ ಒಂದುಮೈಲು ಹೋಗುತ್ತಿದ್ದಂತೆ ಅಕ್ಕಪಕ್ಕದಲ್ಲಿ ಗೋಚರಿಸುತ್ತಿದ್ದ ದೃಶ್ಯಗಳಿಂದ ಒಂದು ಅಲೌಕಿಕ ಅನುಭವದ ತೆಕ್ಕೆಗೆ ಜಾರತೊಡಗಿದರು ರಾಮಣ್ಣ. 'ಸ್ವಲ್ಪ ಹೊತ್ತು ಇಲ್ಲಿ ನಿಲ್ಸೋ...' ಉನ್ಮಾದ ಹುಟ್ಟುತ್ತಿದ್ದ ಸ್ವರದಲ್ಲಿ ಕೇಳಿದರು. ಅವರು ಹಾಗೆ ಕೇಳದಿದ್ದರೂ ಡ್ರೈವರು ಯಾವಾಗಿನ ರೂಢಿಯಂತೆ ಅಲ್ಲಿ ನಿಲ್ಲಿಸುವವನೆ ಇದ್ದ. ಇಳಿದು ಹತ್ತಿರದ ಚಪ್ಪರದತ್ತ ಧಾವಿಸಿದವರನ್ನು ಹಿಂಬಾಲಿಸುವುದು ಗೌರಕ್ಕನಿಗೆ ಕಷ್ಟವಾಯಿತು. ವರ್ಷಗಳ ಕಾಲ ಒಂದು ತರಾ ಬೇಸರ ಬೆಳೆಸಿಕೊಂಡು ನೀರಸ ಮುಖದಲ್ಲಿ ಓಡಾಡುತ್ತಿದ್ದ ಗಂಡ ಇದ್ದಕ್ಕಿದ್ದಂತೆ ಪಾದರಸದಂತೆ ಚುರುಕಾಗಿ